ಕೃಷ್ಣಕಿಶೋರ ಎನ್ನುವವನು ಒಳ್ಳೆಯ ಭಕ್ತ. "ನಾನು ಖ,ಖ,ಖ" ಎಂದು ಅವನು ಹೇಳಿಕೊಳ್ಳುತ್ತಿದ್ದ. 'ಖ' ಎಂದರೆ ಎಲ್ಲವನ್ನೂ ವ್ಯಾಪಿಸಿಕೊಂಡಿರುವುದು, 'ಆಕಾಶ' ಎಂದರ್ಥ. 'ಸರ್ವವ್ಯಾಪಿ ತತ್ತ್ವವೇ ನಾನು' ಎಂಬುದು ಇದರ ಒಳಾರ್ಥ. ಒಂದು ದಿನ ಅವನು ಶ್ರೀರಾಮಕೃಷ್ಣರ ಹತ್ತಿರ ಬಂದ. ಕಳೆಗುಂದಿದವನಂತೆ ಕಂಡ. ಅದಕ್ಕೆ ಶ್ರೀರಾಮಕೃಷ್ಣರು ಕಾರಣ ಕೇಳಿದರು. ಅವನು ಸರ್ಕಾರಕ್ಕೆ ತೆರಿಗೆ ಕಟ್ಟಿರಲಿಲ್ಲ. ಅವನ ಮನೆಗೆ ತೆರಿಗೆ ಸಂಗ್ರಹಿಸುವ ಅಧಿಕಾರಿ ಬಂದಿದ್ದ. ಇಂಥ ದಿನದೊಳಗೆ ತೆರಿಗೆ ಕಟ್ಟದಿದ್ದರೆ, ಮನೆಯಲ್ಲಿರುವ ಪಾತ್ರೆಪಡಗ ಎಲ್ಲವನ್ನೂ ಹೊರಗೆ ಬಿಸಾಡಿಬಿಡುತ್ತೇನೆ ಎಂದು ಬೆದರಿಕೆ ಹಾಕಿ, ನೋಟೀಸ್ ಕೊಟ್ಟಿದ್ದ. ಅದಕ್ಕೇ ಕೃಷ್ಣಕಿಶೋರನ ಮುಖ ಸಪ್ಪೆಯಾಗಿದೆ. ಕಾರಣವನ್ನು ಕೇಳಿ ತಿಳಿದ ಶ್ರೀರಾಮಕೃಷ್ಣರು, ತಮಾಷೆ ಮಾಡುತ್ತಲೇ ಅವನ ದುಃಖವನ್ನು ನಿವಾರಣೆ ಮಾಡಿದರು. "ನೀನು 'ಖ' ತಾನೇ. ನೀನು ಸರ್ವವ್ಯಾಪಿ. ಹೀಗಿರುವಾಗ ಆ ಸಣ್ಣ ಮನೆ ಇದ್ದರೆಷ್ಟು, ಹೋದರೆಷ್ಟು. ಅವರು ಪಾತ್ರೆಪಡಗ ಏನು ಬೇಕಾದರೂ ತೆಗೆದುಕೊಂಡುಹೋಗಲಿ. ನಿನಗೇನಾಗಬೇಕು?" ಎನ್ನುತ್ತಾರೆ. ಶ್ರೀರಾಮಕೃಷ್ಣರ ಮಾತಿನ ಅರ್ಥ ಇದು: "ನೀನು ವೇದಾಂತ ಮಾತನಾಡುತ್ತೀಯೆ. ಆದರೆ ಬದುಕಿನಲ್ಲಿ ಬರುವ ಸಣ್ಣ ದುಃಖವನ್ನೂ ತಡೆದುಕೊಳ್ಳಲು ನಿನಗೆ ಆಗುತ್ತಿಲ್ಲವಲ್ಲ." ನಮ್ಮಲ್ಲೂ ಬಹಳಷ್ಟು ಜನ ಹೀಗೆಯೇ ವರ್ತಿಸುತ್ತೇವೆ. ನಾವು ಆಡುವ ವೇದಾಂತವೆಲ್ಲ ಕಷ್ಟನಷ್ಟಗಳ ಸಮಯದಲ್ಲಿ ಮೂಲೆಗೆ ಬೀಳುತ್ತದೆ. ಇದನ್ನೇ ಶ್ರೀರಾಮಕೃಷ್ಣರು ನಮಗೆ ತೋರಿಸಿಕೊಡುತ್ತಿದ್ದಾರೆ.

ಕೃಷ್ಣಕಿಶೋರ ಏಕಾದಶಿ ಉಪವಾಸ ಮಾಡುತ್ತಿದ್ದ ರೀತಿಯೂ ಸೊಗಸಾಗಿದೆ. ಅದು ಸಾಧಾರಣ ದಿನದ ಆಹಾರಕ್ಕಿಂತಲೂ ಹೆಚ್ಚಾಗಿರುತ್ತಿತ್ತು. ಅದಕ್ಕೇ ರಾಮಕೃಷ್ಣ ಮಹಾಸಂಘದಲ್ಲಿ ಯಾರಾದರೂ ಏಕಾದಶಿ ಉಪವಾಸ ಮಾಡುತ್ತೇನೆ ಎಂದರೆ, "ಕೃಷ್ಣಕಿಶೋರನ ಏಕಾದಶಿಯೇ?" ಎಂದು ತಮಾಷೆ ಮಾಡುವುದು ರೂಢಿಯಲ್ಲಿದೆ. ನಾನು ಅದ್ವೈತ ಆಶ್ರಮದಲ್ಲಿ ಇದ್ದಾಗ, "ಯಾರು ಯಾರು ಉಪವಾಸ ಮಾಡುತ್ತೀರಿ?" ಎಂದು ಕೇಳುತ್ತಿದ್ದರು. ಅದಕ್ಕೆ ನಮ್ಮಲ್ಲಿ ಕೆಲವರು, "ಫಲಾಹಾರ ಏನಿದೆ ಎಂದು ನೋಡಿಕೊಂಡು ನಿರ್ಧಾರ ಮಾಡುತ್ತೇವೆ" ಎಂದು ಹೇಳುತ್ತಿದ್ದೆವು. ಫಲಾಹಾರ ಚೆನ್ನಾಗಿದ್ದರೆ, ಯಾರು ತಾನೇ ಉಪವಾಸ ಮಾಡುವುದಕ್ಕೆ ಹಿಂಜರಿಯುತ್ತಾರೆ?

ಕೇಶವಚಂದ್ರ ಸೇನ ಬ್ರಾಹ್ಮಸಮಾಜದ ನೇತಾರ. ಆಗಿನ ಕಾಲದಲ್ಲಿ ಬಹಳ ಪ್ರಸಿದ್ಧನಾದ ವ್ಯಕ್ತಿ. ಅವನಿಗೆ ಶ್ರೀರಾಮಕೃಷ್ಣರು, "ನಿನ್ನ ಬಾಲ ಬಿದ್ದುಹೋಗಿದೆ" ಎಂದು ಹೇಳುತ್ತಾರೆ. ಇದನ್ನು ಕೇಳಿ ಅವನು ತಬ್ಬಿಬ್ಬಾದ. ಅದಕ್ಕೆ ವಿವರಣೆಯನ್ನು ಶ್ರೀರಾಮಕೃಷ್ಣರು ಆಮೇಲೆ ಕೊಟ್ಟರು. ಕಪ್ಪೆ ಮರಿಗಳಿಗೆ ಬಾಲ ಇರುತ್ತದೆ. ಆಗ ಅವು ನೀರಿನಲ್ಲಿ ಮಾತ್ರ ಸಂಚರಿಸಬಲ್ಲವು. ಬಾಲ ಬಿದ್ದುಹೋದ ಮೇಲೆ, ನೆಲದಲ್ಲಿ ಮತ್ತು ನೀರಿನಲ್ಲಿ – ಎರಡೂ ಕಡೆ ಓಡಾಡಿಕೊಂಡಿರಬಲ್ಲವು. ಹಾಗೆಯೇ, ಕೇಶವಚಂದ್ರ ಸೇನ ಪ್ರಪಂಚದಲ್ಲೂ ಚೆನ್ನಾಗಿದ್ದಾನೆ. ಅದೇ ಸಮಯದಲ್ಲಿ ಆಧ್ಯಾತ್ಮಿಕವಾಗಿಯೂ ಉನ್ನತ ಮಟ್ಟಕ್ಕೆ ಏರಿದ್ದಾನೆ. ಕೇಶವಚಂದ್ರ ಸೇನನ ಶ್ರೇಷ್ಠತೆಯನ್ನು ಶ್ರೀರಾಮಕೃಷ್ಣರು ಕಂಡುಕೊಂಡು ಪ್ರಶಂಸಿಸಿದ ರೀತಿ ಎಷ್ಟು ಸೊಗಸಾಗಿದೆ!

ರಾಮಕೃಷ್ಣ ಮಹಾಸಂಘದ ೧೨ ನೆಯ ಪರಮಾಧ್ಯಕ್ಷರಾದ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅತ್ಯಂತ ಸಾತ್ವಿಕ ಹಾಸ್ಯಪ್ರಜ್ಞೆಯುಳ್ಳವರು. ಅವರು ಮೇಘಾಲಯದ ಚಿರಾಪುಂಜಿಯಲ್ಲಿ ಬಹಳ ವರ್ಷ ಇದ್ದರು. ಒಮ್ಮೆ ಕಾಡಿನಲ್ಲಿ ನಡೆಯುತ್ತ, ಸುಸ್ತಾಗಿ, ಒಂದು ಮರದ ಕೆಳಗೆ ಮಲಗಿಕೊಂಡಿದ್ದಾರೆ. ಅಲ್ಲಿಗೆ ಒಂದು ನಾಯಿ ಬಂದಿದೆ. ಇದ್ಯಾವುದೋ ಸತ್ತ ದೇಹ ಎಂದುಕೊಂಡು, ನೆಕ್ಕುವುದಕ್ಕೆ ಆರಂಭಿಸಿದೆ. ಸ್ವಾಮೀಜಿ ಅಲುಗಾಡದೆ ಹಾಗೆಯೇ ಇದ್ದಾರೆ. ಎಷ್ಟೊಂದು ಸಹನೆ! ಆಗ ಅವರು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದರಂತೆ, "ಸಾಯುವುದಕ್ಕೆ ಇನ್ನೂ ಸಮಯ ಇದೆ. ಇಷ್ಟು ಬೇಗ ಅಲ್ಲ" ಅಂತ. ಅವರಿಗೆ ನಾಯಿ ಕಚ್ಚಲೂಬಹುದಿತ್ತು. ಬೇರೆಯವರಾದರೆ ಎಷ್ಟು ರಂಪಾಟ ಮಾಡುತ್ತಿದ್ದರು. ಅಂಥ ಸಂದರ್ಭದಲ್ಲಿಯೂ ಎಂಥ ಸಹನೆ ಮತ್ತು ಹಾಸ್ಯಪ್ರವೃತ್ತಿ!

ಹೀಗೆ ನಮ್ಮ ಜೀವನದ ಪ್ರತಿಯೊಂದು ನಿಮಿಷವನ್ನೂ ನಾವು ರಸವತ್ತಾಗಿ ಮಾಡಿಕೊಳ್ಳಬಹುದು. ಆಧ್ಯಾತ್ಮಿಕ ಜೀವನದಲ್ಲಿ ಹಾಸ್ಯ, ಆನಂದಗಳ ಪಾತ್ರವನ್ನು ಶ್ರೀರಾಮಕೃಷ್ಣರು ನಮಗೆ ತೋರಿಸಿಕೊಟ್ಟಿದ್ದಾರೆ. ಅವರು ಆನಂದಸ್ವರೂಪರು. ಅವರು ನಮಗೂ ಆನಂದವನ್ನು ನೀಡಲೆಂದು ಅವರನ್ನೇ ಪ್ರಾರ್ಥಿಸಿಕೊಳ್ಳೋಣ. •

ತೀರ್ಥಯಾತ್ರೆ

# ಕುಂಭಮೇಳ- ವಿಶ್ವದ ಅತಿದೊಡ್ಡ ಉತ್ಸವ

ಸ್ವಾಮಿ ಆತ್ಮಶ್ರದ್ಧಾನಂದ



ಇತ್ತೀಚೆಗೆ ಹರಿದ್ವಾರದಲ್ಲಿ ಜರುಗಿದ ಪೂರ್ಣ ಕುಂಭಮೇಳ ಲಕ್ಷಾಂತರ ಶ್ರದ್ಧಾಳುಗಳನ್ನು ಆಕರ್ಷಿಸಿತು. ಪರಮಪಾವನೆ ಗಂಗೆಯ ತಟದಲ್ಲಿ ಸಮ್ಮಿಳಿತಗೊಂಡ ವಿಶ್ವದ ಅತಿ ದೊಡ್ಡ ಮಹೋತ್ಸವದ ಮನೋರಂಜಕ ವಿವರಣೆಯನ್ನು ನಮಗಿತ್ತಿರುವ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'ವೇದಾಂತ ಕೇಸರಿ'ಯ ಸಂಪಾದಕರು. (ಇಂಗ್ಲಿಷ್‌ನಿಂದ ಅನುವಾದ: ಡಾ.ಪಾಂಡುರಂಗ ವಿಠಲ.)

ಒಂದು ಬಿ.ಬಿ.ಸಿ. ಸಾಕ್ಷ್ಯಚಿತ್ರ ಹೀಗೆ ಹೇಳುತ್ತದೆ: "ಭಾರತ ದೇಶದಲ್ಲಿದ್ದಂತೆ ಬೇರೆಲ್ಲೂ ಪ್ರಾಕೃತಿಕ ಪ್ರಪಂಚ ಮತ್ತು ಆಧ್ಯಾತ್ಮಿಕ ಪ್ರಪಂಚಗಳು ಮಿಳಿತಗೊಂಡಿಲ್ಲ. ಇಲ್ಲಿ ಅಗ್ನಿ, ಪ್ರಾಣಿಗಳು, ಮರ, ಬೆಟ್ಟಗಳು ಮತ್ತು ನದಿಗಳನ್ನು ಕೂಡ ಪೂಜಿಸುತ್ತಾರೆ. ಈ ಬಗೆಯ ಪ್ರಕೃತಿದೇವತೆಗಳಲ್ಲಿ ಅತಿ ಶಕ್ತಿಶಾಲಿಯಾದುದು ಗಂಗಾನದಿ. ಈ ಜಲದೇವತೆಯು ಸಾವಿರಾರು ರೀತಿಯಲ್ಲಿ, ಉತ್ತರಭಾರತದ ಹಲವು ಪ್ರದೇಶಗಳನ್ನು ಆಶೀರ್ವದಿಸುತ್ತಾಳೆ. ಶತಶತಮಾನಗಳಿಂದ ತನ್ನ ತಟದಲ್ಲಿ ಜೀವಿಸಿ ಪೂಜಿಸಿದ ಕೋಟ್ಯಂತರ ಶ್ರದ್ಧಾಳುಗಳ ದೇಹ, ಆತ್ಮಗಳಿಗೆ ಚೈತನ್ಯ ನೀಡುತ್ತಾಳೆ; ಆ ಮೂಲಕ ತಾನು ಹರಿಯುವ ಪ್ರದೇಶಗಳಿಗೆ ಒಂದು ರೂಪುರೇಖೆಯನ್ನು ನೀಡಿ ಜೀವ ತುಂಬುತ್ತಾಳೆ. ಆಕೆಯ ಸುತ್ತಲೂ ಜನನ–ಮರಣ–ಪುನರ್ಜನ್ಮಗಳ ಅಗಣಿತ ಮಹಾಜೀವನಚಕ್ರಗಳ ಲೀಲೆ ನಿರಂತರವಾಗಿ ಸಾಗುತ್ತಲೇ ಇದೆ. ಹೀಗೆ ಪ್ರಕೃತಿ ಮತ್ತು ಆಧ್ಯಾತ್ಮಿಕ ಜಗತ್ತುಗಳೆಂಬ ಎರಡು ತಟಗಳ ನಡುವೆ ಹರಿಯುತ್ತಿರುವ ಗಂಗೆಯು ಭಾರತದ ಜೀವದಾಯಿನಿ ನದಿಯಾಗಿದೆ."

ಹನ್ನೆರಡು ವರ್ಷಗಳ ನಂತರ ಇತ್ತೀಚೆಗೆ ಹರಿದ್ವಾರದಲ್ಲಿ ನಡೆದ ಮಹಾ ಕುಂಭಮೇಳ, ಗಂಗಾನದಿಯ ಮಾನವೀಯ ಮತ್ತು ದೈವಿಕ ಆಯಾಮಗಳ ಅನ್ಯೋನ್ಯ ಒಡನಾಟವನ್ನು ಅತ್ಯದ್ಭುತವಾಗಿ ನಮ್ಮ ಅನುಭವಕ್ಕೆ ತಂದುಕೊಟ್ಟಿದೆ. ೨೦೧೦ರ ಮಕರ ಸಂಕ್ರಾತಿಯಿಂದ (ಜನವರಿ ೧೪) ಚೈತ್ರ ಪೂರ್ಣಿಮೆ ಅಥವಾ ವೈಶಾಖ ಪೂರ್ಣಿಮೆಯವರೆಗೆ (ಏಪ್ರಿಲ್ ೨೮) ಮೂರು ತಿಂಗಳಿಗೂ ಹೆಚ್ಚು ಕಾಲ ಗಂಗಾಮಾತೆಯು ವಿವಿಧ ಬಗೆಗಳಲ್ಲಿ ಇಲ್ಲಿ ಪೂಜಿತಳಾದಳು. ಸಾಧುಗಳು, ಭಕ್ತರು, ಸಂನ್ಯಾಸಿಗಳು, ಯಾತ್ರಿಕರು, ದರ್ಶಕರು ಈ ಮೂರೂವರೆ ತಿಂಗಳುಗಳಲ್ಲಿ ಪ್ರೇಮಮಯಿ ಗಂಗೆಯಲ್ಲಿ ಮಿಂದರು; ದಡದ ಅಂಚಿನಲ್ಲಿ ನಿಂದು ಹೂವು–ದೀಪಗಳನ್ನು ನದಿಯಲ್ಲಿ ತೇಲಿಬಿಟ್ಟು, ಭಕ್ತಿ–ಪವಿತ್ರತೆ–ಶ್ರದ್ಧೆಗಳ ಭಾವವನ್ನು ಹರಿಸಿದರು. ಈ ಸಂಪ್ರದಾಯವು ಶತಶತಮಾನಗಳಿಂದ, ಅಷ್ಟೇಕೆ, ಇತಿಹಾಸಪೂರ್ವಕಾಲದಿಂದಲೂ ನಡೆದುಕೊಂಡು ಬಂದಿದೆ.

ಕುಂಭಮೇಳಕ್ಕೆ ಹೋಗಲಾರದವರು ಅದರ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳುವುದುಂಟು. ಕುಂಭಮೇಳ ಎಂದರೇನು? ಅದನ್ನು ಏಕೆ ನಡೆಸುತ್ತಾರೆ? ಎಷ್ಟು ಕಾಲ, ಯಾವಾಗ ನಡೆಸುತ್ತಾರೆ? ಅಲ್ಲೇನು ನಡೆಯುತ್ತದೆ? ಏಕೆ ಇಷ್ಟೊಂದು ಜನ ಅಲ್ಲಿ ಸೇರುತ್ತಾರೆ? ಕುಂಭಮೇಳ ಒಂದು ಅಪೂರ್ವ ಅನುಭವ. ಅದನ್ನು ಇತರರಿಗೆ ಭಾಷೆಯ ಮೂಲಕ ವಿವರಿಸಲಾಗದು. ಅದರಲ್ಲಿ ಸ್ವತಃ ಪಾಲ್ಗೊಳ್ಳಬೇಕು, ಅಷ್ಟೇ. ಅನುಭವಕ್ಕೆ ಸರಿಸಾಟಿ ಇಲ್ಲ, ತಾನೇ?

## ಕುಂಭಮೇಳ ಎಂದರೇನು?

ಕ್ರಿಸ್ಟೋಫರ್ ಎನ್. ಬರ್ಚೆಟ್, 'ಕುಂಭಮೇಳ ಮತ್ತು ಸಾಧುಗಳು– ಅಮೃತತ್ವದ ಅನ್ವೇಷಣೆ' ಎನ್ನುವ ತಮ್ಮ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: "ಮನುಷ್ಯನಿಗೆ ತಿಳಿದಿರುವ ಅತಿ ಪುರಾತನ ಧಾರ್ಮಿಕ ಸಮಾವೇಶವೆಂದರೆ ಈ ಕುಂಭಮೇಳ. ಎಂದಿನಿಂದ, ಇಷ್ಟೊಂದು ಸಂಖ್ಯೆಯಲ್ಲಿ, ಈ ರೀತಿಯಲ್ಲಿ ಧಾರ್ಮಿಕ ಮುಖಂಡರು ಸೇರಲು ಆರಂಭಿಸಿದರೆಂಬುದು ಇತಿಹಾಸವನ್ನು ಎಷ್ಟು ಕೆದಕಿದರೂ ತಿಳಿಯುವುದು ಅಸಾಧ್ಯ. ಎಲ್ಲಾ ಜಾತಿ, ಪಂಥಗಳ ಆಧ್ಯಾತ್ಮಿಕ ವ್ಯಕ್ತಿಗಳು ಇಲ್ಲಿ ನೆರೆಯುತ್ತಾರೆ. ಅಷ್ಟೇ ಅಲ್ಲ, ರಾಜಮಹಾರಾಜರುಗಳೂ ಇಲ್ಲಿಗೆ ಬರುತ್ತಾರೆ. ಅಸಂಖ್ಯಾತ ಜನರು ಇದನ್ನು ತೀರ್ಥಯಾತ್ರೆಯ ಕೇಂದ್ರವನ್ನಾಗಿ ಪರಿಗಣಿಸುತ್ತಾರೆ. ಇಲ್ಲಿ ಸೇರಿದ ಧಾರ್ಮಿಕ ಮುಂದಾಳುಗಳು ಆಗಮಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳ ಚರ್ಚೆಯಲ್ಲಿ ತೊಡಗುತ್ತಾರೆ. ಶ್ರದ್ಧೆ ಮತ್ತು ಆಚರಣೆಗಳಲ್ಲಿನ ಅಂತರವನ್ನು ಸಮಾಲೋಚಿಸಿ, ಅವನ್ನು ವೈಚಾರಿಕತೆಗೆ ಒಳಪಡಿಸುವ ಧಾರ್ಮಿಕ ಸಂಸತ್ತು ಎಂದು ಇದನ್ನು ಕರೆಯಬಹುದು. ಹಿಂದೂ ಇತಿಹಾಸ, ಪುರಾಣಗಳಲ್ಲಿ ಈ ಮೇಳದ ಬಗ್ಗೆ ಹಲವಾರು ಕಥೆಗಳಿವೆ. ಅವುಗಳಲ್ಲಿ ಅಮೃತವನ್ನು ಪಡೆಯಲು ದೇವತೆಗಳು ಮತ್ತು ದೈತ್ಯರು ಸೇರಿಕೊಂಡು, ಕ್ಷೀರಸಾಗರವನ್ನು ಕಡೆದ ಕಥೆ ಪ್ರಸಿದ್ಧವಾದುದು. ಅನಂತರ ದೇವದಾನವರ ನಡುವೆ ಅಮೃತಕ್ಕಾಗಿ ಹೋರಾಟವಾಯಿತು. ಆಗ ಅಮೃತಕುಂಭದಿಂದ ಕೆಲವು ಹನಿಗಳು ಅಲ್ಲಲ್ಲಿ ಬಿದ್ದವು. ಆ ಸ್ಥಳಗಳನ್ನು ಪುನೀತವನ್ನಾಗಿ ಮಾಡಿದವು. ಆ ಸ್ಥಾನಗಳಲ್ಲಿಯೇ ಕುಂಭಮೇಳ ಜರುಗುವುದು."

ಇತರ ಉತ್ಸವಗಳಂತೆ ಕುಂಭಮೇಳದಲ್ಲಿ ಯಾವುದೋ ಒಂದು ದೇವಸ್ಥಾನವು ಕೇಂದ್ರವಲ್ಲ. ಇತರ ಉತ್ಸವಗಳು ಯಾವುದೋ ಒಬ್ಬ ದೇವತೆಯನ್ನು ಮುಖ್ಯವಾಗಿಟ್ಟುಕೊಂಡಿರುತ್ತವೆ. ಇಲ್ಲಿ ಅದೂ ಇಲ್ಲ. ಇಲ್ಲಿ ಗಂಗೆಯ ತಟವೇ ದೇವಸ್ಥಾನ. ಗಂಗಾಮಾತೆಯೇ ದೇವತೆ. ಗಂಗೆಯು ಅತಿ ಪವಿತ್ರಳು ಎಂಬ ಶ್ರದ್ಧೆಯನ್ನು ಇಟ್ಟುಕೊಳ್ಳುವುದು ಮತ್ತು ಗಂಗಾಸ್ನಾನ ಮಾಡುವುದೇ ಈ ಉತ್ಸವದ ಗುರಿ ಮತ್ತು ಉದ್ದೇಶ. ನಾವಿಲ್ಲಿ ಸ್ನಾನ, ಜಪ, ಉಪವಾಸ, ಸೇವೆ, ಪೂಜೆ, ಭಜನೆ, ಕೀರ್ತನೆ, ಪ್ರವಚನ, ಶ್ರವಣ ಹಾಗೂ ದೇವತಾದರ್ಶನಗಳಿಂದ ಪುನೀತರಾಗುತ್ತೇವೆ. ಆಧ್ಯಾತ್ಮಿಕಭಾವವೆಂಬುದು ಇಡೀ ಕುಂಭಮೇಳದಲ್ಲಿ ಅನುರಣಿತವಾಗಿರುತ್ತದೆ. ಇಲ್ಲಿ ಮಾನವತೆಯ ಸಾಗರವೇ ಒಂದುಗೂಡಿರುತ್ತದೆ. ಹೀಗಾಗಿ ಅದನ್ನು ಭೂಮಿಯಲ್ಲಿನ ಅತಿ ಬೃಹತ್ತಾದ ಧಾರ್ಮಿಕ ಮೇಳ ಎಂದೇ ಕರೆಯುತ್ತಾರೆ.

## ಪುರಾಣ ಐತಿಹ್ಯ

ರಾಮಾಯಣ, ಮಹಾಭಾರತ, ಭಾಗವತಗಳಲ್ಲದೆ ವಿಷ್ಣುಪುರಾಣದಲ್ಲಿಯೂ ಕ್ಷೀರಸಾಗರ ಮಥನ ವರ್ಣಿತವಾಗಿದೆ. ದೇವತೆಗಳು ಮತ್ತು ರಾಕ್ಷಸರು ಪ್ರಜಾಪತಿಯಾದ ಕಶ್ಯಪನ ಮಕ್ಕಳು. ತಾವು ಕಳೆದುಕೊಂಡ ಶಕ್ತಿಯನ್ನು ಮರಳಿ ಪಡೆಯಲು ಅವರು ಕ್ಷೀರಸಮುದ್ರವನ್ನು ಕಡೆದರು. ಮಂದರ ಪರ್ವತವೇ ಅದಕ್ಕೆ ಕಡೆಗೋಲಾಯಿತು, ವಾಸುಕಿಯೇ ಅದಕ್ಕೆ ಹಗ್ಗವಾಯಿತು, ಕಡೆಗೋಲಿಗೆ ಆಧಾರವಾಗಿ ಶ್ರೀಮಹಾವಿಷ್ಣುವೇ ಆಮೆಯ ರೂಪದಲ್ಲಿ ನಿಂತನು. ದೇವದಾನವರಿಬ್ಬರೂ ಕೂಡಿ ವರ್ಷಾನುಗಟ್ಟಲೆ ಸಮುದ್ರವನ್ನು ಕಡೆದರು. ಇದರಿಂದ ಕ್ರಮವಾಗಿ ಕಾಮಧೇನು, ಲಕ್ಷ್ಮಿ, ಕಲ್ಪವೃಕ್ಷಗಳು ಉದ್ಭವವಾದುವು. ಅನಂತರ ಹಾಲಾಹಲ ಅಥವಾ ಕಾಳಕೂಟ ವಿಷ ಹುಟ್ಟಿತು. ದೇವಾಸುರರ ಪ್ರಾರ್ಥನೆಯಂತೆ, ಪರಮಶಿವನು ಆ ವಿಷವನ್ನು ಕುಡಿದನು. ಪಾರ್ವತಿಯ ಪ್ರಾರ್ಥನೆಯ ಮೇರೆಗೆ ಕಂಠದಲ್ಲಿ ನಿಲ್ಲಿಸಿಕೊಂಡನು. ಅವನ ಕಂಠವು ನೀಲಿಯಾಯಿತು. ಹೀಗೆ ಅವನು 'ನೀಲಕಂಠ'ನಾದನು.

ಕಟ್ಟಕಡೆಗೆ ದೇವವೈದ್ಯನಾದ ಧನ್ವಂತರಿಯು ಅಮೃತಕುಂಭವನ್ನು ಕೈಯಲ್ಲಿ ಹಿಡಿದುಕೊಂಡು, ಕಾಣಿಸಿಕೊಂಡನು. ದೇವರಾಜ ಇಂದ್ರನ ನಿರ್ದೇಶನದಂತೆ ಇಂದ್ರನ ಮಗನಾದ ಜಯಂತನು ಅಮೃತಕುಂಭವನ್ನು ಎತ್ತಿಕೊಂಡು, ರಾಕ್ಷಸರ ಕೈಗೆ ಸಿಗದೆ ಇರುವ ಹಾಗೆ, ಹನ್ನೆರಡು ದಿನಗಳ ಕಾಲ ಓಡುತ್ತಲೇ ಇದ್ದನು. ಆ ಸಮಯದಲ್ಲಿ ಭೂಮಿಯ ಮೇಲೆ ನಾಲ್ಕು ಕಡೆಗಳಲ್ಲಿ ಹಾಗೂ ಸ್ವರ್ಗ ಮತ್ತು ಪಾತಾಳಗಳಲ್ಲಿ ಎಂಟು ಕಡೆ ಅಮೃತದ ಬಿಂದುಗಳು ಬಿದ್ದವು. ಭೂಮಿಯ ಮೇಲಿನ ಸ್ಥಳಗಳೆಂದರೆ, ಗಂಗಾತೀರದ ಹರಿದ್ವಾರ, ಶಿಪ್ರಾ ನದಿಯ ದಂಡೆಯ ಮೇಲೆ ಇರುವ ನಾಸಿಕ್, ಗೋದಾವರೀ ನದಿಯ ತಟದಲ್ಲಿರುವ ಉಜ್ಜಯಿನಿ ಮತ್ತು ತ್ರಿವೇಣೀ ಸಂಗಮವಿರುವ ಪ್ರಯಾಗ. ದೇವತೆಗಳ ಒಂದು ದಿನ, ಮಾನವರ ಒಂದು ವರ್ಷಕ್ಕೆ ಸಮನಾಗಿದೆ ಎಂಬ ನಂಬಿಕೆ. ಹೀಗಾಗಿ ಜಯಂತನು ೧೨ ದಿನಗಳ ಕಾಲ ಓಡಿದ ಪ್ರಯುಕ್ತ ಹನ್ನೆರಡು ವರ್ಷಕ್ಕೆ ಒಮ್ಮೆಯಂತೆ ಕುಂಭಮೇಳ ಜರುಗುತ್ತದೆ.


ಗಂಗಾಪೂಜೆ